ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲುಗು
ವಾ ಸ ಪ ತ್ರಿ ಕೆ ಗೆ
ಚಂದಾದಾರರಾಗಿರಿ
ವಾರ್ಷಿಕ ಚಂದಾ ರೂ. 2-4-0
ಬಿಡಿ ಪ್ರತಿ 4 ಆಣೆ.

ಕಾರ್ಯಾಲಯ ;
ಶ್ರೀ ವಾಸವಾಂಬ ಭವನ
ಅಶೋಕಾ ರಸ್ತೆ ಮೈಸೂರು

Regd No. M. 1299 ವಾರಪತ್ರಿಕೆ ೬ ಕಾಸು

Weekly & Daily SATYAVADI Founded 1917

ಸತ್ಯವಾದಿ

ಸಂಚಿಕೆ 26) ಶನಿವಾರ 19—12—1942 (ಸಂಪುಟ 76

— ಗುಲ್ಮ —

ಎಲ್ಲಾ ತರಹದ ಜೀರ್ಣಕೋಶದ ವ್ಯಾಧಿಗಳಿಗೆ (ಹೊಟ್ಟೆ ನೋವು, ತೇಗು, ಎದೆ ನೋವು ಒಡೆಯುವ, ಪಕ್ಕಶೂಲೆ, ವಾಂತಿ, ಬಾಯಿ ...) ಇವುಗಳಿಗೆಲ್ಲಾ ನಮ್ಮಲ್ಲಿ ಖ್ಯಾತಿ ಯಾದ ಔಷಧಿ ದೊರೆಯುತ್ತದೆ. ಅಪೇಕ್ಷಿಸಿ ವರ. ಚಿಹ್ನೆಗಳನ್ನು ಕುರಿತು 0-1-6 ಸ್ಟ್ಯಾಂಪಿನೊಡನೆ ಒರೆಯಿರಿ.

ಎಸ್. ಲಿಂಗೇಗೌಡ,
ಕುರುಬರ ಬೀದಿ, ಕೊಳ್ಳೇಗಾಲ.

ಮಾರ್ತಾಂಡ ತರಂಗ — ವರ್ತಮಾನ ಸಂಗ್ರಹ — ಆಗೇರ 20—12—42 ರಿಂದ ಮಾಯಾಜ್ಯೋತಿ

ಅಮೇರಿಕಾದಲ್ಲಿ ಸೋಬಲ್ ಬಹುಮಾನ ಪಡೆದವರ ಒಂದು ಸಂಘ ಇದೆ ಇಲ್ಲಿ ಮಿಸ್ ಪೆರಿಲ್‌ಒಕ್ ಎಂಬಾಕೆಯು ಈಗ ನಡೆಯುತ್ತಿರುವುದು ಪ್ರಪಂಚದ ಯುದ್ಧವಲ್ಲ. ಯೂರೋಪ್‌ನವರು ಸ್ವಪ್ರ ಯೋಜನ ಯುದ್ಧವೆಂದಳು. ರಷ್ಯ ವಿಷಯದಲ್ಲಿ ಯಾರು ಯಾವ ಬಗೆಯ ವಿಷಯ ತಿಳಿದುಕೊಳ್ಳಬಾರ್ದೆಂದಳು.

ಲಿಬ್ಯ ಸರ್ಕಾರವು ಮಿಷ ಸರ್ಕಾರದೊಂದಿಗೆ ಸ್ನೇಹವನ್ನು ತ್ಯಜಿಸಿದೆ ಲಿಬ್ಯ ಯಾವ ಒಂಟೆಗಳನ್ನೆಲ್ಲಾ ಕೂಡಲೆ ಹಾಜರಾಗಬೇಕೆಂದು ಆಜ್ಞೆ ಮಾಡಿದೆ.

ಸ್ವಿಟ್ಜರ್ಲೆಂಡಿನಲ್ಲಿರುವ ಅಗಾಖಾರ್ ರವರ ನಿಲಯಕ್ಕೆ ಕಳ್ಳರು ನುಗ್ಗಿ ಅನೇಕ ಬೆಳ್ಳೀ ಸಾಮಾನುಗಳನ್ನೂ ಆಹಾರ ಪದಾರ್ಥಗಳನ್ನೂ ಕದ್ದುಕೊಂಡು ಹೋಗಿರುವರು.

ಬಿಲ್ಲಿವೋರದ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಪಾರ್ಸೀ ಬೇಸಾಯಗಾರನ 40,000 ರೂ. ಬಾಳುವ ಆಭರಣಗಳನ್ನೂ ಸನ ನಗದನ್ನೂ ಕಳ್ಳರು ದೋಚಿಕೊಂಡು ಪಲಾಯನರಾಗಿರುವರು.

ಪೂರ್ವ ಯೂರೋಪಿನಲ್ಲಿ ಯಹೂದ್ಯರನ್ನು ನಿರ್ನಾಮ ಮಾಡುತ್ತಿರುವ ನಾಜೀ ನೀತಿಯನ್ನು ವಿಷಯದಲ್ಲಿ ಸಂಯುಕ್ತ ರಾಷ್ಟ್ರಗಳು ಎಚ್ಚರಿಸಿವೆ.

ಸ್ಟಾಲಿನ್‌ಗ್ರಾಡ್ ರಂಗದಲ್ಲಿ ರಷ್ಯಾ ಮುನ್ನುಗ್ಗಾಟ ಜೋರಾಗಿದೆ.

ಆಫ್ರಿಕಾರಂಗದಲ್ಲಿ ಅಕ್ಸಿಸ್ ಸೈನ್ಯಗಳು ಬೋಸಿನಲ್ಲಿ ಸಿಕ್ಕಿ ಬಿದ್ದಂತಿವೆ. ಟಾರೋಪೆಟ್ಟಿನಲ್ಲಿ ನಾಜಿ ಮುನ್ನುಗಾಟ ನಿಂತಿವೆ.

ಷಿರ್‌ವಾಡೇ ರೈಲ್ವೇ ಸ್ಟೇಷನ್ ಒಂದು ಸಶಸ್ತ್ರ ಗುಂಪಿನವರು ಬೆಂಕಿ ಇಟ್ಟಿದ್ದು, ತಕ್ಕಮಟ್ಟಿಗೆ ನಷ್ಟವಾಗಿರುವುದಾಗಿ ತಿಳಿಯ ಬಂದಿದೆ.

ವಿಚಿ ರೋಡಿಯೋ ಪ್ರಕಾರ ಲವಾಲ್ ಹಿಟ್ಲರ್ ಇಬ್ಬರೂ ಸೇರಿ ಮಾತುಕತೆ ಇನ್ನೆರಡೇ ದಿನದಲ್ಲೇ ನಡೆಸುವರಂತೆ. ಆ ಕಾಲದಲ್ಲಿ ಹಿಟ್ಲರ್ ಸಹಾ ಹಾಜರಿರುವರಂತೆ.

ಈಜಿಪ್ಟ್ ಸರ್ಕಾರದ ಕೋರಿಕೆ ಪ್ರಕಾರ ಇಂಡಿಯಾ ಸರ್ಕಾರದವರು ಅಲ್ಲಿಗೆ ಒಂದು ಚರ್ಮವನ್ನು ಕಳಿಸಿರುತ್ತಾರೆ. ಇದರ ನಮೂನೆಯಂತೆ ಸಾವಿರಾರು ಚರ್ಮಕಗಳನ್ನು ತಯಾರುಮಾಡಿ ಮರುಭೂಮಿಯ ನೈವ ನದಿ ದಡದಲ್ಲಿ ಹತ್ತಿ ಬೆಳೆಯುವ ಪ್ರದೇಶಗಳಿಲ್ಲಿ ಇದನ್ನು ರೈತರಿಗೆ ಕೊಟ್ಟು ರೈತರು ನೂಲುಗಳನ್ನು ಮಾಡಲು ಯತ್ನಿಸುವಂತೆ ಸೋಡಿವಿಯಾ ಗಾಂಧಿಯು ಹಾತ್ಮೆ.

ಬೊಂಬಾಯಿನ ದಾವರಿನಲ್ಲಿ ಕೆಲ ದೊಂಬಿಗಾರರು ವಿದ್ಯಾರ್ಥಿಗಳು ನಡೆಸುತ್ತಿದ್ದ ವೆಂಡಣಿಗೆಯಲ್ಲಿ ಸೇರಿ ಒಂದು ಸೋಡಾವಾಟರ್ ಫ್ಯಾಕ್ಟರಿ ಮತ್ತು ಮೂರು ಬಸ್ಸುಗಳ ಮೇಲೆ ಕಲ್ಲು ಹೊಡೆದು ನಷ್ಟಪಡಿಸಿರುವರು.

ಹೈದರಾಬಾದ್ ಸಂಸ್ಥಾನದಲ್ಲಿ ಅಲ್ಲಿನ ಅಧರ್ಾಣೆ, 2 ಕಾಸು ಈ ತಾಂಬ್ರದ ನಾಣ್ಯಗಳನ್ನು ಕರಗಿಸಿ ಬ್ರಿಟಿಷ್ ಇಂಡಿಯಾವಲ್ಲಿ ಲಾಂ ತೊಲೆಗೆ ಒಂದು ರೂಪಾಯಿನಂತೆ ಮಾರುತ್ತಾರೆ. ಒಂದು ರೂಪಾಯಿದು ನಾಣ್ಯವಲ್ಲಿ ಮುವತ್ತು ತೊಲ ತಾಂಬ್ರ ಸಿಗುವುದು.

ಇನ್ನುಮುಂದೆ ಆಲೂಗಡ್ಡೆಯನ್ನು ವನಂತಾ ಪ್ರಾಂತ್ಯದಿಂದ ಎಲ್ಲೂ ರವಾನೆ ಮಾಡಕೂಡದು.

ನ್ಯೂಯಾರ್ಕ್ ನಗರದಲ್ಲಿ ಪ್ರತಿ ದಿನವೂ 40,0 0-0 ದಿನ ಪತ್ರಿಕೆ ಮಾರಾಟವಾಗುತ್ತೆ.

ಬಂಗಾಳದಿಂದ ಹೊರಕ್ಕೆ ಅಕ್ಕಿ ಕಳುಹಿಸುವದನ್ನು ಸರಕಾರದವರು ನಿಲ್ಲಿಸಬೇಕೆಂಬ ನಿರ್ಣಯವನ್ನು ಕಲ್ಕತ್ತಾ ಮುನಿಸಿಪಾಲಟಿಯವರು ಮಂಜೂರ್ಮಾಡಿದ್ದಾರೆ.

ಶ್ರೀ 'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದಪ ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

STOCGS KIN

Socks, Sweaters, Jersey, Scarfs Lady-Shawls (wollen & Cotton) Badges, Crowns, Stars, Buckles, (brass & worsted) etc available Sample V.P.P. Cheapest rates.

Baini Ram & Sons,
Ludhiana

ಆಮಶಂಕೆ .... ಅತಿಸಾರಕ್ಕೆ

ಡಿಸೆಂಟಿಸೈಡ್

ಸಂಜೀವನ

ಪ್ಯಾಕೆಟ್ ಒಂದಕ್ಕೆ ೨ ಆಣೆ
ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟೇಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ನಿಮ್ಮ ರಾಶ್ಯಾಧಿಪತಿಯು ಸಂತೋಷವನ್ನು ಕಡಮೆ ಮಾಡುವನು ರಾಜಕೀ ಕಾರ್ಯ ಅನುಕೂಲತೆ ಶಾಂತತೆ ಇಷ್ಟಬಂಧು ಮಿತ್ರಾದಿಗಳಿಂದ ಸೌಖ್ಯತೆ ಸರ್ಕಾರಿ ಕಾರ್ಯ ಉತ್ತಮ ಧಾನ ಲಾಭ ಆರೋಗ್ಯ ಉತ್ತಮ ತಾ॥ 20, 21 ಸುಖ ಕಡಮೆ ಸಂತಾಪ ಉದಯ ಕಾಲ ಅರ್ಚನೆ ಮಾಡಿಸಿ ಉತ್ತವ.

ವೃಷಭ

ನಿಮಗೆ ವಿಚಾರಗಳು ಜಾಸ್ತಿ ಚಂಚಲತೆ ಧೈರ್ಯ ಅವಲಂಬಿಸಿ ಕಾರ್ಯ ನಿಧಾನತೇ ಮಿತ್ರರು ಅಹಿತರಾಗುವರು ಖರ್ಚು ಜಾಸ್ತಿ ಸೌಖ್ಯತೆ ಕಡಮೆ ಉದಯ ಕಾಲ ಆದಿತ್ಯ ಹೃದಯ ಪಾರಾಯಣ ಮಾಡಿ ತಿಲದಾನ ಮಾಡಿ ಸುಖ ತಾ॥ 20, 21 ಗೃಹಕೃತ್ಯದಲ್ಲಿ ಸೌಖ್ಯ ಧಾನ್ಯ ಶೇಖರ.

ಮಿಥುನ

ಈ ವಾರದಲ್ಲಿ ನಿಮಗೆ ಅಷ್ಟು ಕಷ್ಟವಿಲ್ಲದಿದ್ದರು ದುಡ್ಡಿನ ಅಡಚನೆ ಬರುವದು ವ್ಯಯಾಧಿಕ ಆಸ್ಪೇಸ್ಪರು ನಿಷ್ಕಾರಣವಾಗಿ ಕೋಪ ಮಾಡುವರು ಶತ್ರುಜನ ಮುಂದಾಗಿರುವರು ಸರ್ಕಾರಿ ಕಾರ್ಯದಲ್ಲಿ ಬೇಧ ತೋರುವದು ಗೃಹಕೃತ್ಯದಲ್ಲಿ ಸುಖ ಕಡಮೆ ಉಷಃಕಾಲ ನವಗ್ರಹ ಪೂಜಿಸಿ ಸುಖ ತಾ॥ 22, 23 ಸುಖ ಶುಭ ಕಾಲ ಲಾಭ.

ಕರ್ಕಾಟಕ

ಮಿತ್ರ ಬಂಧು ಜನರಿಗೆ ಉಪಕಾರ ಮಾಡುವಿರಿ ಆದರೆ ಇಮಲ್ಲಿ ದೂಷಣೆಗೆ ಪಾತ್ರರಾಗುವಿರಿ ಆರೋಗ್ಯಕಾರ್ಯದಲ್ಲಿ ಒಳ್ಳೆ ಹೆಸರು ವಿದ್ಯಾ ಸುಖ ಗೃಹಕೃತ್ಯದಲ್ಲಿ ಸುಖ ಲಾಭ ಉತ್ಸಾಹ ಕೀರ್ತಿ ತಾ॥ 22-23 ನಿಷ್ಕಾರಣವಾಗಿ ವ್ಯಯಾಧಿಕ ನಿಷ್ಠೂರ ಭಾಷಣ ಉದಯಕಾಲ ದೇವರಿಗೆ ನಂದಾದೀಪ ಹತ್ತಿಸಿ ಸುಖ.

ಸಿಂಹ

ಈ ವಾರದಲ್ಲಿ ನಿಮ್ಮ ಆರೋಗ್ಯ ಉತ್ತಮ ಸರ್ಕಾರಿ ಕಾರ್ಯ ರಾಜಕೀ ವಿಷಯ ಸಮಾಧಾನತೆ ಇರುವದು ಲಾಭಕಾರ್ಯ ಧಾನ್ಯವೃದ್ಧಿ ಶತ್ರು ದೂರವಾಗುವರು. ನಿಮ್ಮ ಒಳ್ಳೆ ಸ್ಥಿತಿ ನೋಡಿ ನಿಮ್ಮ ಆಪ್ತ ಕೆಲವು ಮಿತ್ರರು ದೂಷಿಸುವರು ಉತ್ಸಾಹ ಕೀರ್ತಿ ತಾ॥ 21-23 ಖರ್ಚು ಬಾಬು ಮನಃಕ್ಲೇಶ ಉದಯಕಾಲ ಹುತ್ತಕ್ಕೆ ಹಾಲು ಬೆಡಿ ಲಕ್ಷ್ಮೀಪೂಜೆ ಮಾಡಿಸಿ ಉತ್ತಮ ಫಲ.

ಕನ್ಯಾ

ಈ ವಾರದಲ್ಲಿ ಒಳ್ಳೆ ಜನ ಸಹವಾಸ ಆರೋಗ್ಯ ಸರ್ಕಾರಿ ಕಾರ್ಯ ಅನುಕೂಲತೆ ಮನೋತ್ಸಾಹ ಆನಂದ ಕಾರ್ಯ ಪ್ರಿಯ ಜನರಿಗೆ ಸೌಖ್ಯತೆ ಕಾರ್ಯ ಧಾನ್ಯ ಶೇಖರ ಸನ್ಮಾನ ಭಾಗ್ಯ ತಾ॥ 20 21 ಹಿತರಿಗೆ ಸೌಖ್ಯತೆ ಕಡಮೆ ಮನಃಕ್ಲೇಶ ಉಷಃ ಕಾಲ ಗೋವು ಪೂಜೆ ಮಾಡಿ ಪರಿಹಾರ ಸೌಖ್ಯ.

ತುಲಾ

ನಿಮಗೆ ಉತ್ಸಾಹ ಕಾರ್ಯ ಅಪೇಷ್ಟರಿಗೆ ಸೌಖ್ಯತೆ ರಾಜಕೀ ಕಾರ್ಯ ಅನುಕೂಲತೆ ಧಾನ್ಯ ಶೇಖರ ಗೃಹಕೃತ್ಯಾನುಕೂಲತೆ ಶುಭವಾರ್ತಾ ಬಂಧು ಮಿತ್ರಾದಿ ಸಮಾಗಮ ತಾ॥ 21-22 ಶತ್ರು ಜನ ಮುಂದಾಗುವರು ಮನಸ್ಸಿನ ಕಾರ್ಯ ಕೈಗೂಡುವದು ಕಡಮೆ ಚಂಚಲತೆ ಉಷಃ ಕಾಲ ಒನ್ನಿ ಪೂಜೆ ಮಾಡಿ ಶುಭ ದಾಯಕ.

ವೃಶ್ಚಿಕ

ನಿಮಗೆ ಹಿತವಾದ ಸೌಖ್ಯತೆ ಕಡಮೆ ಅನಾರೋಗ್ಯ ಸರ್ಕಾರಿ ಕಾರ್ಯ ಉತ್ತಮ ಅದಾಯಕ್ಕಿಂತಲು ಖರ್ಚು ಜಾಸ್ತಿ ಭೃತ್ಯ ವರ್ಗದವರಲ್ಲಿ ನಿಷ್ಠೂರ ಚಂಚಲತೆ ಉಷಃ ಕಾಲ ಸುಬ್ರಹ್ಮಣ್ಯ ಜಪಮಾಡಿಸಿ ಉತ್ತಮ ಫಲ ತಾ॥ 20-21 ಉತ್ತಮ ಫಲ ಕಾರ್ಯಾನುಕೂಲತೆ.

ಧನು

ನಿಮ್ಮ ಕಾರ್ಯ ವಿಚಾರದಲ್ಲಿ ಎರಡನೆಯವರನ್ನು ನಂಬದೆ ನೀವೆ ಮಾಡಿ ಜಯ ಮನಸ್ಸು ಶಾಂತತೆ ಶತ್ರು ಜನ ಮಿತ್ರರಾಗುವರು ಗೃಹಕೃತ್ಯಾನುಕೂಲತೆ ಸರ್ಕಾರಿ ಕಾರ್ಯ ಉತ್ತಮ ಧನಧಾನ್ಯಲಾಭ ಉತ್ತಮ॥ 19-20 ಉಷಃ ಕಾಲ ಸಹಸ್ರ ನಾಮಾರ್ಚನೆ ಮಾಡಿಸಿ ಇನ್ನೂ ಫಲ ಉತ್ತನು.

ಮಕರ

ಈ ವಾರದಲ್ಲಿ ನಿಮಗೆ ಲಾಭಕಾರ್ಯ ಉತ್ತಮವಿಲ್ಲ ಶತ್ರುಜನ ಮುಂದಾಗಿರುವರು ಗೃಹಕೃತ ದಲ್ಲಿ ಸುಖ ಕಡಮೆ ಸ್ಥಳಾಧಿಕ ಬಂಧು ಮಿತ್ರರಿಗೆ ಸೌಖ್ಯತೆ ಕಡಮೆ ಮನಸ್ಸಿನ ಕಾರ್ಯಸಿದ್ಧಿ ತೋರುವದು ಚಂಚಲತೆ ನವಗ್ರಹ ಪೂಜೆಮಾಡಿಸಿ ನಂದಾದೀಪ ಹಚ್ಚಿಸಿ ಶುಭಫಲ ತಾ॥ 24 25 ಉತ್ತಮ ಫಲ. ಸೌಖ್ಯತೆ ಉತ್ಸಾಹ ಕಾರ್ಯ.

ಕುಂಭ

ನಿಮ್ಮ ಚಂಚಲತೆ ಬಿಡಿ ಧೈರ್ಯ ಅವಲಂಬಿಸಿ ಕಾರ್ಯಾನುಕೂಲತೆ ಉತ್ತಮ ಗೃಹಕೃತ್ಯದಲಿ ಸುಖ ಕಡಮೆಬರುತ್ತೆ ಧಾನ್ಯವೃದ್ಧಿ ವಿರೋಧಸ್ಥರು ದೂರವಾಗುವರು ರಾಜಕೀಕಾರ್ಯ ಉತ್ತಮ, ತಾ॥ 20-21 ಕಾರ್ಯ ವಿಘ್ನ ಚಾಂಚಲತೆ ಉದಯಕಾಲ ಎಳನೀರಗಳಿಗೆ ಫಲ ಕೊಡಿ ಉತ್ತಮಫಲ.

ಅಹಂಬ್ರಹ್ಮ

(ಬರೆದವನು—ನಾನು)

ನಾನು ನಾನಲ್ಲ

ನನಗೆ ಏನಾದರೂ ಬರೆಯಬೇಕೆಂಬ ಆಸೆ ನನಗೆ ಎಷ್ಟೋ ಆಸೆಗಳಿವೆ ಅವುಗಳಲ್ಲಿ ಇದೂ ಒಂದು. ಏನಾದರೂ ಬರೆಯಬೇಕು! ಏನು ಬರೆಯುವುದು? ನಿತ್ಯಕ್ಕೆ? ಫಲಾಪೇಕ್ಷೆಯಿಂದಲೇ? ಅಥವಾ ಆತ್ಮ ತೃಪ್ತಿಗಾಗಿಯೇ?

ಫಲಾಪೇಕ್ಷೆಯಿಂದ ಬರೆಯುವ ಒರೆಗೆಯು ಇತರರ ವೇಜ್ಞಗೆಗಾಗಿಯೇ ಆಗಿರುತ್ತದೆ. ಫಲಾಪೇಕ್ಷೆಯು ಅಧೀನತೆಯನ್ನು ತಂದೊಡ್ಡುತ್ತದೆ. ಈ ಹಂಗಿನಿಂದ ಹುಟ್ಟುವ ದಾಕ್ಷಿಣ್ಯವು ಲೇಖನಿಯನ್ನು ತಡೆಯುತ್ತದೆ. ಖಂಡಿತವಾದಿಯು ಲೋಕವಿರೋಧಿಯೂ ಆಗಲು ಇದೇ ಕಾರಣ. ಇದುದರಿಂದ ನನ್ನ ಅಭಿಪ್ರಾಯಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳುವುದಾದರೆ ಫಲಾಪೇಕ್ಷೆಯನ್ನು ಬಿಡಬೇಕು.

'ನಿಮ್ಮ ಹೊಗಳಿ ಬರೆಯುವವರು ಯಾರಿದ್ದಾರೆ?' ಎಂಬುದಾಗಿ ಹೊಗಳಿ ಕೆಲಸ ಮಾಡಿಸಿಕೊಳ್ಳುವವರೂ ಮಾಡಿಸಿಕೊಳ್ಳುತ್ತಿರುವವರೂ ಸಹಿಷ್ಟೋ ಜನರಿದ್ದಾರೆ. ಆದರೆ ಮಾಡುವುದೇನು? ಕೆಲಸವಾದ ಮೇಲೆ ಅವರಿಗೆ ನನ್ನ ನೆನಪು ಉಳಿದಿದ್ದರಲ್ಲವೇ? ಆ ನೆನಪು ಆ ಕೆಲಸದ ಜೊತೆಯಲ್ಲಿಯೇ ಮುಗಿದು ಹೋಗಿರುತ್ತದೆ. ಅವರೇನು ಮಾಡಿಯಾರು? ಏಷಃ! 'ಉಪಾಧ್ಯಾಯಾಶ್ಚ ವೈದ್ಯಾಶ್ಚ ಕಾರ್ಯಾಂತೇ ಅಸ್ಯಯೋಜಕಾಃ' ಎಂಬುದಾಗಿ ನೀತಿಶಾಸ್ತ್ರವೇ ಸಾರುತ್ತಿರುವುದಲ್ಲವೇ?

ಹಾಗಾದರೆ ನನ್ನ ಹಾಗೆ ಬರೆಯುವವರು ಮತ್ತಾರೂ ಇಲ್ಲವೇ. ಇಲ್ಲವೇನು? ಇಲ್ಲ. ಇಲ್ಲ ಖಂಡಿತವಾಗಿಯೂ ಇಲ್ಲ. ನನ್ನ ಹಾಗೆ ಬರೆಯುವವರು ಈ ಸೃಷ್ಟಿಯಲ್ಲಿಯೇ ಯಾರೂ ಇಲ್ಲವೆಂದು ಖಡಾಖಂಡಿತ ಹೇಳುವೆನು. ಈ ವಾಕ್ಯವನ್ನು ಓದಿ ನಿಮಗೆ, ನಿಮಗೇನಾದರೂ ಸಿಟ್ಟು ಬಂದೀತೇನು? ಇವನೇನು ಬ್ರಹ್ಮನೋ ಎಂದು ಕೇಳುವಿರೇನು? ಅಲ್ಲ. ಅಲ್ಲ. ನಾನು ಬ್ರಹ್ಮನಲ್ಲ! ಅಹಂಬ್ರಹ್ಮ! ನಾನು ನಾನಲ್ಲ! ಅಹಂಬ್ರಹ್ಮ! 'ಅಹಂ' (ನಾನು) ಎಂದು ಹೇಳಿಕೊಳ್ಳುವ 'ಬ್ರಹ್ಮ ಚೈತನ್ಯ'! ನನ್ನಲ್ಲಿ ಅಡಗಿರುವ ಆ 'ಚೈತನ್ಯ'ನ ಪ್ರೇರಣೆಯಿಂದ ನಾನಿದನ್ನು ಬರೆಯುತ್ತಿರುವೆನು.

ನನಗಿಂತ ಎಷ್ಟೋಪಾಲು ನಿಮಗಿಲಾಗಿ ಬರೆಯುವವರು ಎಷ್ಟೋ ಜನರಿದ್ದಾರೆ. ಆದರೆ ನನ್ನಂತೆ ಬರೆಯುವವರು ಮಾತ್ರ ಬೇರಾರೂ ಇಲ್ಲನೇ ಇಲ್ಲ.

ಬರೆಯುತ್ತಿರುವ 'ನಾನೇನೆಂದು ಹೇಳಿದರೆ ಅದು ಅಹಂಕಾರವೆನಿಸುವುದು. ಆದರೆ ಬರೆಯಿಸುತ್ತಿರುವ 'ನಾನೇ'ನಾನಾದರೆ ಅದು ಸಾಕಾರವೆನಿಸುವುದು.

ನಾನು! ಇದು ನನ್ನಲ್ಲಿ ಮಾತ್ರವಲ್ಲ! ಎಲ್ಲರಲ್ಲಿಯೂ ಇರುವುದು. ನನ್ನಲ್ಲಿ, ನಿಮ್ಮಲ್ಲಿ, ಅವರಲ್ಲಿ, ಎಲ್ಲರಲ್ಲಿಯೂ ಎಲ್ಲದರಲ್ಲಿಯೂ ಎಲ್ಲೆಲ್ಲಿಯೂ ನಾನೇ ಇರುವೆನು. ನಾನಿಲ್ಲದ ಸ್ಥಳವಿಲ್ಲ, ನಾನು ನೋಡದ ನೋಟವಿಲ್ಲ. ನಾನು ಮಾಡದ ಕೆಲಸವಿಲ್ಲ ನಾನು ಉಣ್ಣದ ಊಟವಿಲ್ಲ; ನಾನು ಕಲಿಯದ ವಿದ್ಯೆಯಿಲ್ಲ; ನಾನು ತಿಳಿಯದ ವಿಷಯವಿಲ್ಲ; ನಾನು ಭೋಗಿಸದ ಭೋಗವಿಲ್ಲ; ನಾನು ಗಳಿಸದ ಐಶ್ವರ್ಯವಿಲ್ಲ; ಈ ಬ್ರಹ್ಮಾಂಡದಲ್ಲಿ ಎಲ್ಲೆಲ್ಲಿಯೂ ನಾನೇನಾನಾಗಿರುವೆನು; ಎಲ್ಲವೂ ನನ್ನದೇ! 'ನಾನು' ಈ ಶಬ್ದದಲ್ಲಿ ಎಂತಹ ಶಕ್ತಿಯಿದೆ; ಆದುದರಿಂದಲೇ ಸಿದ್ಧಾಂತಕಾರರು ಇದಕ್ಕೆ 'ಪ್ರಥಮ ಪುರುಷ' ವೆಂದು ಕರೆದಿರುವರು!

ನಾನು ಬರೆದಿರುವುದನ್ನು ಎಲ್ಲರೂ ಒಪ್ಪುವರೇನು? ಎಂದಿಗೂ ಒಪ್ಪಲಾರರು. ಭೂಷಣ ದೂಷಣಗಳು ಬರೆಯುವ ನನಗಲ್ಲದೇ ಬರೆಯಿಸುವ ನನಗಲ್ಲ! ನನ್ನ ಅಂತರಾತ್ಮನು ಸೇರಿಸಿದಂತೆ, ನನ್ನ ಮನಸ್ಸಿಗೆ ಒಪ್ಪಿದಂತೆ ನಾನು ಬರೆದಿರುತ್ತೇನೆ. ಒಬ್ಬೊಬ್ಬರಿಗೆ ಒಂದೊಂದು ಭಾಗವು ರುಚಿಸಬಹುದು. ಒಬ್ಬರಿಗೆ ಅಮೃತವಾದದ್ದು ಮತ್ತೊಬ್ಬರಿಗೆ ವಿಷವಾಗಬಹುದು ಆದುದರಿಂದಲೇ 'ಊಟ ತಪ್ಪಿಟ್ಟಿ' ಎಂದು ಹೇಳುವರು. ಇದೂ ಒಂದು ಒಗೆಯ ಊಟ ಆ ಅಂತರ್ಯಾಮಿಯ ಪ್ರೇರಣೆಯಿಂಬ ಕ್ಷೀರದಲ್ಲಿ ಅನುಭವನೆಂಬ ಸಕ್ಕರೆಯನ್ನು ಬೆರೆಸಿ, ಸಾಹಿತ್ಯವೆಂಬ ಸ್ವರ್ಣಪಾತ್ರೆಯಲ್ಲಿ ಸಿದ್ಧಗೊಳಿಸಿದ ಷಡ್ರಸೋಪೇತವಾದ ಪಾಯಸ! ಇಷ್ಟಪಟ್ಟವರು ಸೇವಿಸಿರಿ! ಜೋಡವಾದವರಿಗೆ ಹೇಳುವದೇ ಸಿದೆ? (ಮುಂದುವರಿಯುವುದು)

ಮೌನ

ನಿಮ್ಮ ಮನಸ್ಸು ಉತ್ಸಾಹಭರಿತವಾಗುವುದು ಬೇರೆಯವರ ಸಹಾಯದಿಂದ ನಮ್ಮ ಕಾರ್ಯ ಕೈಗೂಡುವದು ಬಂಧು ಮಿತ್ರ ಸಹಾಯ ಉತ್ತಮ ದೇವತಾ ಗುರು ಸೇವಾ ಫಲ ಉತ್ತಮ ಗೃಹಕೃತ್ಯಾನುಕೂಲತೆ ರಾಜಕೀ ಕಾರ್ಯ ಉತ್ತಮ. ಕೀರ್ತಿ ತಾ॥ 20-21 ಕಾರ್ಯ ವಿಘ್ನ ಚಂಚಲತೆ ಉಷಃಕಾಲ ಶ್ರೀಕೃಷ್ಣಪೂಜೆ ಮಾಡಿಸಿ ಕ್ಷೀರದಾನ ಮಾಡಿ ಉತ್ತಮ ಫಲ.

ವಿದೇಶ

ರಷ್ಯದ ಕಾಲುದಳವೆಲ್ಲವೂ ಮೆಂಜು ಗಡ್ಡೆಗಳ ಮೇ ನಿಂತು ಹೋರಾಡುವ ತರಬೇತನ್ನು ಪಡೆಯುತ್ತಿವೆ.

ಈ ವರ್ಷ ದೇಶದ ರಕ್ಷಣೆ ಒಗೆ 11,50,000 ಪೌಂಡುಗಳನ್ನು ವ್ಯಯ ಮಾಡಬಹುದೆಂದು ಟರ್ಕೀ ಗ್ರಾಂಡ್ ನ್ಯಾಷನಲ್ ಅಸೆಂಬ್ಲಿಯವರು ಒಪ್ಪಿಟ್ಟಿಸಲ್ಲಿ ಸೆರಿಸಲು ಒಪ್ಪಿರುತ್ತಾರೆ

ಜರ್ಮನರು ಕೌಕಸಸ್ಸಾನಲ್ಲಿ ಒಂದು ತರಹ ಹೊಗೆಯನ್ನು ಉಪಯೋಗಿಸುವರು. ಇದನ್ನು ಬಿಟ್ಟರೆ ಶತ್ರುಗಳು ಎದುರಿಗೆ ಒಂದರೂ ಎದುರಿಗೆ ಕಾಣಿಸುವುದಿಲ್ಲ. ಕಣ್ಣಿನಿಂದ ನೀರು ಸುರಿದು ಏನೂ ಮಾಡಲು ತೋಚದೆ ಮಂಕಾಗಿ ಹೋಗುವರು.

ಮೂರನೆ ತರಗತಿಯ ಟಿಕೀಟಿನಿಂದ ಒಂದನೇ ಕ್ಲಾಸಿನಲ್ಲಿ ಒಬ್ಬನು ಲಂಡನ್ನಿನಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದನು. ದಾರಿಯಲ್ಲಿ ಟಿಕೀಟು ಎಗ್ಜಾಮಿನರು ಪರೀಕ್ಷೆ ಮಾಡಲು ಒಂದಾಗ, ಎರಡು ಕಿತ್ತಲೇ ಹಣ್ಣು ಬೇಕೋ, ಇಲ್ಲವೇ 1–5–0 ಬೇಕೋ ಎಂದು ಕೇಳಲು ಟಿಕೀಟು ಪರೀಕ್ಷಕನು ಕಿತ್ತಲೇ ಹಣ್ಣುಗಳಿಂದಲೇ ತೃಪ್ತನಾದನಂತೆ.

ಆರವತ್ತು ವರ್ಷಕ್ಕೆ ಮೀಂದವರು ಯುದ್ಧದ ಗೋಜಿಗೆ ಹೋಗದಂತಿದ್ದರೆ. ಇನ್ನೇನು ಅವರಿಗೂ ಪೀಕಲಾಟ ಬಂದಿತ. ಲಂಡನ್ನಿನ ಮುಖ್ಯ ಡಾಕ್ಟರೊಬ್ಬರು ಈ ಮುದುಕರಿಗೆ ಒಂದು ಒಗೆಯ ಇಂಜೆಕ್ಷನ್ ಕೊಟ್ಟರೆ ಸ್ವಾಯದಂತೆ ಶಕ್ತಿಯುತರಾಗುವರಂತೆ. ಆದರೆ ಅಂಳುಮುರಳು ಇರುವವರನ್ನು ನೋಡಿ ಚುನಾಯಿಸುವೇಕಂತೆ. ಸಾಯೂ ಕಡೆಗಾಲದಲ್ಲೂ ಒಂದು ಗ್ರಹಚಾರ !

ಒಂದು ದೇಶವು ಉನ್ನತಸ್ಥಿತಿಗೆ ಬರಬೇಕಾದರೆ ಆ ದೇಶದ ಗ್ರಾಮಸ್ಥೈಗಾರಿಕೆಯೇ ಬಹು ಮುಖ್ಯವಾದುದು. ಏದು ಅಮೇರಿಕಾ ಉಪ ಪ್ರೆಸಿಡೆಂಟರು ಹೇಳುತ್ತಾರೆ.

ಜಪಾನಿನಲ್ಲಿ ಜಲಮುದ ಮಂಹಷ್ಟ

ನಾನು ಟೋಕಿಯೊನಲ್ಲಿದ್ದಾಗ ಮ್ಯುನಿಸಿಪಲ್ ಆಫೀಸಿಗೆ ಒಬ್ಬ ಝೂಡಮೂಲಿಯನ್ನು ಪ್ರತಿ ದಿವಸವೂ ಕಳಿಸುವಂತೆ ಬರೆದೆನು. ಅಲ್ಲಿನ ಮುಖ್ಯಾಧಿಕಾರಿಯು ನನ ಕಾಗದವನ್ನು ನೋಡಿ ನಿಶ್ಯಯಗೊಂಡನುತೆ ! ನನಗೋಸ್ಕರ ಸ್ಪೆಷಲ್ಲಾಗಿ ಒಬ್ಬ ಝೂಡಮೂಲಿಯನ್ನು ಪ್ರತಿ ದಿವಸವೂ ಕಳಿಸಲು ಆಗುವುದಿಲ್ಲ ಪ್ರತಿ ೧೦ ದಿನಸಕ್ಕೆ ಒಂದಾವೃತ್ತಿ ಒರತ್ತಾನೆ ಇಲಿನ ಪದ್ಧತಿ ಒಂದು ತಿಂಗಳಿಗೆ ಒಂದೇ ಒಂದ ಸಲ ಗುಡಿಸಲು ಒರುವ ಪದ್ಧತಿ ಎಂದು ಒರೆದನು. ಪ್ರತಿ ಮನೆಯಲ್ಲಿ ದಿವಸಕ್ಕೆ ಎರಡ ಸಲ ದ್ರಾವಕವನ್ನು ಹಾಕುವೆದರಿಂದ ಕೆಟ್ಟ ವಾಸನೆಯಾಗುವುದಿಲ್ಲ ಮನೆ ಮನೆಗೂ ಅಳವಾದ ಗುಂಡಿಯಲ್ಲಿ ಮಲವನ್ನು ಕೂಡಿ, ತಿಂಗಳಿಗೊಂದು ಸಲ ಝೂಡಮೂಲಿಗಳು ವರದ ಪೆಟ್ಟಿಗೆಗಳಲ್ಲಿ ಗಾಡಿಗಳಲ್ಲಿ ಸಾಗಿಸುವರು. ಯಾತಕ್ಕೆ ಮಲವನ್ನು ಸಮುದ್ರಕ್ಕೆ ಸಾಗಿಸುವುದಿಲ್ಲವೆಂದು ಅಧಿಕಾರಿಯನ್ನು ಕೇಳಲು, ಏನು ಈ ಉತ್ಕೃಷ್ಟವಾದ ಪದಾರ್ಥವನ್ನು ನೀರಿನ ವಾಲುವಾಡುವುದೆ? ಇದರಷ್ಟು ಉತ್ಕೃಷ್ಟವದಾರ್ಥವು ಪ್ರಪಂಚದಲ್ಲಿ ಇದೆಯೆ ಎಂದು ಹೇಳಿದನಂತೆ. ಜಪಾನಿನಲ್ಲಿ ಪ್ರತಿ ರಸ್ತೆಯಲ್ಲಿಯೂ ಬೋರ್ಡುಗಳನ್ನು ಪಾಕಿ ಪಕ್ಕದಲ್ಲಿರುವ ಗದ್ದೆಗಳ ಗುಂಡಿಯಲ್ಲಿ ಜಲ ವಲ ವಿಸರ್ಜನೆ ಮಾಡಿರೆಂದು ಒರೆದಿರುತ್ತಾರಂತೆ.

ನಟ ನಟಿಯರು

ಚಂದ್ರಮತಿ ಪಾರ್ಟಿ ಮಾಡಲು ನಟಿ ಶ್ರೀ ಸುಬ್ಬಲಕ್ಷ್ಮಿಗೆ 75,೦೦೦ ರೂಪಾಯಿ ಕೊಟ್ಟರೂ ಬರವುದಿಲ್ಲವಂತೆ!

ನಟಿ ಸಧನಜೋನ್ ಪಂಚಾಂಗ ನೋಡದೆ ಯಾವ ಕೆಲಸವನ್ನೂ ಮಾಡುವುದಿಲ್ಲ.

ನಟ ವಜ್ರಹರ್‌ಖಾನ್‌ಗೆ ಪ್ರಥಮದಲ್ಲಿ ತಿಂಗಳಿಗೆ ೬೮ ರೂಪಾಯಿ ಸಿಕ್ಕಿತು. ಈಗ ತಿಂಗಳಿಗೆ ೨-೩ ಸಾವಿರದ ವರೆಗೂ ಸಿಗುವುದು.

ಹಿಂದುಸ್ಥಾನದಲ್ಲಿ ವಾಕ್ಚಿತ್ರ ಕೆಲಸದಲ್ಲಿ 60, ೦೦ ಜನರಿಗೆ ಉದ್ಯೋಗ ಸಿಕ್ಕಿರುತ್ತೆ.

ಚಟ್ನಿ—ಉಪ್ಪಿನಕ್ಷಾಯಿ

ಲಕ್ಸಂಬರ್ಗಿನಿಂದ ಒಂದ ವಾರ್ತೆಯಂತೆ. ಮುಸೋಲನಿಯು ಯುದ್ಧದಲ್ಲಿ ತಾನು ಜಯಶೀಲನಾಗುವನಂತೆ. ಈಗ ಆಪನು ಆತ್ಮಶಕ್ತಿಶಾಸ್ತ್ರವನ್ನು ಪಠಿಸುತ್ತಿರುವುದೇ ಹೀಗೆ ತಿಳಿದುಕೊಳ್ಳುವುದಕ್ಕೆ ಕಾರಣವಿರಬಹುದು !

ಯುದ್ಧಾನಂತರ ಪ್ರಪಂಚದ ಎಲ್ಲಾ ರಾಜ್ಯಗಳಿಗೂ ಸ್ವರಾಜ್ಯವೆಂಬ ಮಾತುಗಳು ಚರ್ಚಿಲ್, ಹಾಲೆಂಡು ರಾಣಿ, ಇವರ ಬಾಯಿಂದ ಒಂದು ಸಾಕಾಗಿ, ಈಗ ಯೂರೋಪು ರಾಜ್ಯಗಳಿಗೆ ಕಾಲೊನಿಕೊಡುವುದಾಗಿ ಹೇಳುತ್ತಿರುವರು.

ವೈಸರಾಯರ ಅವಧಿಯು ವತ್ತೆರಡು ತಿಂಗಳು ಹೆಚ್ಚಿಸಿದರಿಂದ ಬ್ರಿಟನ್ನಿನ ನೀತಿ ಏಕರೀತಿಯೆಂದು ತಿಳಿಯಬಹುದು.

ಫರಿದ್‌ಪುರದಲ್ಲಿ ಸುಶೀಲ ಕುಮಾರ ಮುಖರ್ಜಿ ಮತ್ತು ಸುನೀಲಕುಮಾರ ಸೆಗುಪ್ತರು ಹಿಬ್ಬರು ಪೋಲೀಸು ಜವಾನನ ಮೇಲೆ ಅತ್ಯಾಚಾರ ನಡೆಸಿ ಅವನ ರುಮಾಲನ್ನು ಕಿತ್ತುಕೊಂಡರೆಂಬ ಆಪಾದನೆ ಮೇಲೆ ತಲಾ 9 ತಿಂಗಳು ಸಜಾ ಮತ್ತು 50 ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

ಅಸ್ಸಾರಿನಲ್ಲಿ ಕಾಗದಕ್ಕೆ ಅಭಾವ

ಆ ಸಂಸ್ಥಾನದ ವಿದ್ಯಾ ಇಲಾಖೆಯ ಮಂತ್ರಿಯವರು ಇನ್ನು ಮೇಲೆ ಎಲ್ಲಾ ಪ್ರೈಮರಿ ಪಾಠಶಾಲೆಯ ವಿದ್ಯಾರ್ಥಿಗಳು ಒಣಗಿದ ಬಾಳೆ ಎಲೆಯಲ್ಲಿ ಬರೆಯಬೇಕೆಂದಿರುವರು ಇದಕ್ಕೆ ಆ ದೇಶದಲ್ಲಿ ಬೆಳೆಯುವ ಒಂದು ಜಾತಿ ಜೊಳದ ಕಡ್ಡಿ ಅನುಕೂಲವಾಗಿದೆಯಂತೆ.

ಭಾರಿ ಯುದ್ಧ ನೌಕಾ

ಇದುವರಿಗೆ ಯಾವ ಜನರಿಂಗವು ತಯಾರ್‌ಮಾಡಿದಂಥ ಒಂದು ಭಾರಿ ಯುದ್ಧ ನೌಕವನ್ನು ಅಮೇರಿಕಾ ಸಂಯುಕ್ತ ಸಂಸ್ಥಾನದವರು ಬಹು ಬೇಗನೆ ತಯಾರು ಮಾಡಿ ನಿನ್ನೆ ದಿನಸ ಕೆಲಸಕ್ಕೆ ಬಿಟ್ಟರು. ಇದಂ ಹೆಸರು ನ್ಯೂಜೆರಸಿ.

ವಿವಿಧ ವರ್ತಮಾನ

ಇಂಗ್ಲಂಡಿನಲ್ಲಿ ಕಳೆದ ಯುದ್ಧದಲ್ಲಿ ಏಳಾವರ್ತಿ ಮಾತ್ರ ಪಾರ್ಲಿಮೆಂಟಿನ ಗುಟ್ಟು ಪಾಟಿಂಗುಗಳು ನಡೆದಿತ್ತು. ಅದರೆ ಈಗಿನ ಯುದ್ಧದಲ್ಲಿ ಈಗಾಗಲೇ ಇಪ್ಪತ್ತು ಪಾಟಿಂಗುಗಳಾಗಿನೆ.

ಏಡ್ಡಾ ಪುರದ ನಿರಾಶ್ರಿತರ ಸಹಾಯಕ್ಕಾಗಿ ಮದ್ರಾಸು ಗೌರ್ನರವರು ರೂ 200 ಗಳನ್ನೂ, ಚೈನಾದ ಮ್ಯಾಡಂ ಚಾಂಗ್ ಕೈಷೇಕರು 50000 ರೂಪಾಯಿಗಳನ್ನೂ ಕೊಟ್ಟಿರುವರು

ಯುದ್ಧ ಮುಗಿದನಂತರ ಯಾವ ಬಗೆಯ ಶಾಂತಿ ಸ್ಥಾಪಿಸಬೇಕೆಂದು ವಿತ್ಸ್ ಪಕ್ಷದವರು ನಿರ್ಧರಿಸಿಲ್ಲವೆಂದೂ, ಈಗ ತಾನೇ ಬ್ರಿಟಿಷ್ ಅಮೇರಿಕಾ ದೇಶಗಳಲ್ಲಿ ಸುಮಾರು 30000 ಮೈಲಿ ಸುತ್ತಿ ಬಂದ ಒಬ್ಬ ತುರ್ಕಿ ಪತ್ರಿಕೆಗಾರನು ಹೇಳಿರುತ್ತಾನೆ.

300 ರೂಪಾಯಿನ ವರೆಗೆ ಸಂಬಳ ಪಡೆಯುತ್ತಿರುವ ಅಧಿಕಾರಿಗಳ ಸಂಬಳವನ್ನು ಶೇಕಡಾ 50 ರಷ್ಟು ಹೆಚ್ಚಿಸಬೇಕೆಂದು ಅಸ್ಸಾಂ ಮಿನಿಸ್ಟೀರಿಯಲ್ ಆಫೀಸರ್ಸ್ ಅಸೋಸಿಯೇಷನ್ನಿನವರು ಮುಖ್ಯ ಮಂತ್ರಿ ಸರ್ ಸಾಡುಲ್ಲರವರನ್ನು ಕೋರಿರುತ್ತಾರೆ.

ವಿಮಾನ ದಾಳಿಗಳ ಗಲಾಟೆಗಾಗಿ ಚಿಟಿಗಾಂಗಿನಲ್ಲಿ ಸ್ಕೂಲು ಮತ್ತು ಕೋರ್ಟುಗಳ ಕೆಲಸ ನಿಲ್ಲಿಸಿ ಅವನ್ನು ಒಳಪ್ರಾಂತ್ಯಕ್ಕೆ ವರ್ಗಾಯಿಸಬೇಕೆಂದು ಅಲ್ಲಿ ಡಿಸ್ಟ್ರಿಕ್ಟ್ ಬಾರ್ ಅಸೋಸಿಯೇಷನ್ನಿನವರು ಬಂಗಾಳಾ ಮುಖ್ಯ ಮಂತ್ರಿಗೂ ಮತ್ತು ಹೈ ಕೋರ್ಟಿಗೂ ಶಾಂತೀ ಕಳುಹಿಸಿರುತ್ತಾರೆ.

ಸೇವಾಗ್ರಾಮದ ಆಶ್ರಮದ ಪ್ರೊ|| ಜೆ. ಪಿ. ಭನ್‌ಸಾಲಿಯವರು ಉಪವಾಸವ್ರತ ಪ್ರಾರಂಭಮಾಡಿ 34 ದಿನಗಳಾದವು. ಉಪವಾಸ ನಿಲ್ಲಿಸಲು ಅನೇಕರು ಪ್ರಯತ್ನಿಸುತ್ತಿದ್ದಾರೆ.

ಮೊನ್ನೆ ದಿವಸ ಫ್ರೆಂಚರ ಮಿ|| ಲಾವಲರು ಉತ್ತರ ಆಫ್ರಿಕಾದ ಫ್ರೆಂಚರನ್ನು ಸೆದೆಬಡಿಯುತ್ತೇನೆ. ನನಗೆ ಜರ್ಮನಿಯವರೇ ಬೇಕು, ಇವರಿಂದಲೇ ಫ್ರೆಂಚರಿಗೆ ಮೋಕ್ಷವೆಂದಿರುತ್ತಾರೆ.

ಶಕ್ತಿ ಸಾಧನೆಗೆ ಸುಲಭೋಪಾಯವು

ಶಕ್ತಿ ಸುಧಾ

ಸೇವನೆಯೆಂದು ನಿಮ್ಮನೆಯಲ್ಲಿರಲಿ

ಮೈಸೂರು ನ್ಯಾಯವಿಧಾಯಕ ಸಭೆ

(ಸತ್ಯವಾದಿ ಸ್ಪೆಷಲ್ ಸೆಷ್ಷಿಗಾರರಿಂದ) ಬೆಂಗಳೂರು ಡಿ 10

ಆರನೇ ದಿನದ ಕಾರ್ಯಕಲಾಪ

ಮಧ್ಯಾಹ್ನ 12 ಗಂಟೆಗೆ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ರಾಜಮಂತ್ರಪ್ರವೀಣ ಶ್ರೀ ಆನಂತರಾಮ್ಮರವರು ಡೆಲ್ಲಿಯಲ್ಲಿ ಸೇರುವ ಭಾರತದ ಆಹಾರ ಸದಾರ್ಥ ವಿಚಾರಗಳ ಸಭೆಯಲ್ಲಿ ಭಾಗವಹಿಸಲು ಪ್ರಯಾಣ ಮಾಡಿದ ಪ್ರಯುಕ್ತ ಅವರು ಸಭೆಗೆ ಬರಲಿಲ್ಲ. ಅವರ ಪರ ರಾಜಮಂತ್ರಪ್ರವೀಣ ಶ್ರೀ ರಾಮನಾಥ್ ರವರು ಕೆಲಸ ನಡೆಸ್ತಿತ್ತಿರುವರು.

ಶ್ರೀ ಡಿ. ಎಸ್. ಮಲ್ಲಪ್ಪನವರು—ಆಸಿಸ್ಟೆಂಟ್ ಸರ್ಜನ್ ಹೆಂಗಸರು 1 ವರ್ಷ ಪ್ರೊಬೇಷನ್ ಮೇಲೆ ರೂ. 100 ಮೇಲೆ. 120–10–200 ಗ್ರೇಡ್ ಆಗಿದ್ದು ನಂತರ 80–10–120 ಸ್ಕೇಲಿನಲ್ಲಿಟ್ಟಿದ್ದರ ಬಗ್ಗೆ ಕೇಳಿದ ಪ್ರಶ್ನೆಗೆ 120–10–200 ಸ್ಕೇಲು 80–10–120 ನಿರ್ದೇಶನಮಾಡಿದ್ದರಿಂದ ಅವರನ್ನು ಆ ಸ್ಕೇಲಿನಲ್ಲಿ ತೋರಿಸಲಾಗಿದೆ ಎಂದು ಉತ್ತರ ಕೊಡಿಸಿತು.

ಶ್ರೀ ರಾಜರವರು ಅಸ್ಪೃಶ್ಯರ ದೇವಸ್ಥಾನ ಪ್ರವೇಶ, ಪಾನನಿರೋಧದ ವಿಚಾರದ ಬಗ್ಗೆ ಮಾಡಿದ ವ್ಯಶ್ಚಿಗಳಿಗೆ ಉತ್ತರ ಕೊಡಲಾಯಿತು.

ಶ್ರೀ ಒದು ನಾರಾಯಣರಾ— ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರೆಷ್ಟುಮಂದಿ, ಈಗಿನ ಚಳುವಳಿಯ ಬಗ್ಗೆ ನಿರ್ಬಂಧಿಸಲ್ಪಟ್ಟಿರುವರು ಮತ್ತು ಶಿಕ್ಷಿಸಲ್ಪಟ್ಟಿರುವರು ಎಂದು ಕೇಳಿದ ಪ್ರಶ್ನೆಗೆ, ಪ್ರತಿನಿಧಿಸಭೆಯವರು. 34 ಮಂದಿ ನಿರ್ಬಂಧಿಸಲ್ಪಟ್ಟಿರುವರು ಮತ್ತು ಒಬ್ಬರು ಶಿಕ್ಷಿಸಲ್ಪಟ್ಟಿರುವರು : ನ್ಯಾಯಸಭೆಯ 8 ಮಂದಿ ನಿರ್ಬಂಧಿಸಲ್ಪಟ್ಟಿರುವರು ಎಂದು ಉತ್ತರ ಕೊಡಿಸಿತು.

ದೇಶದ ಸದ್ಯದ ಚಳುವಳಿ ಪ್ರಾರಂಭವಾದಂದಿನಿಂದ ಎಷ್ಟು ಮಂದಿ ರಾಜಕೀಯ ಕಾರಣಗಳಿಗಾಗಿ ನಿರ್ಬಂಧಿಸಲ್ಪಟ್ಟಿರುವರು ಮತ್ತು ಶಿಕ್ಷಿಸಲ್ಪಟ್ಟಿರುವರು ಎಂಬ ಪ್ರಶ್ನೆಗೆ, 1382 ಮಂದಿ ನಿರ್ಬಂಧಿಸಲ್ಪಟ್ಟಿರುವರು ಮತ್ತು 654 ಮಂದಿ ಶಿಕ್ಷಿಸಲ್ಪಟ್ಟಿರುವರೆಂದು ಉತ್ತರ ಕೊಡಿಸಿತು.

ಶ್ರೀ ಪಿಚ್. ಬಿ ಗುಂಡಪ್ಪಗೌಡರು, ಸೆಲೆಕ್ ಕಮಿಟಿಯು ರೇಷ್ಮೆಹುಳುಗಳ ರೋಗ ನಿವಾರಣಾ ವಿಷಯದಲ್ಲಿ ಸಭೆಯ ಮುಂದಿಟ್ಟ ಒಪ್ಪಿಗೆ ಪಡೆದರು ಸೆಲೆಕ್ಟ್ ಕಮಿಟಿ ರಿಪೋರ್ಟಿನಲ್ಲಿ ಸದಸ್ಯರೊಬ್ಬರಾ ಶ್ರೀ ಬಿ ಎಸ್. ಪುಟ್ಟಸ್ವಾಮಿಯವರು ತಮ್ಮ ಕೊಟ್ಟಿರುವ ಅಭಿಪ್ರಾಯದಲ್ಲಿ. ರೋಗದ ಹುಳುಗಳ ಪರೀಕ್ಷೆಯು ವಿಚಾರ ಸರಿಯಾಗಿ ಪರೀಕ್ಷೆ ನಡೆಯಿಸದೆ ಹೋದರೆ ಸಾಕಷ್ಟು ರೈತರಿಗೆ ಬಹಳ ಕಷ್ಟವಾಗುತ್ತೆಂದು ಸಿರೂಪಿಸಿದರು.

ಸಿಎಲ ಡಿಸೆಜಿಲಿಡೆ ನಿವಾರಣೆಯ ಮಸೂದೆಯ ವಿಷಯಗಳನ್ನು ಶ್ರೀ ರಾಜು ರವರು ವಿವರಿಸಿದರು. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದಕ್ಕೆ ಸಭೆಯು ಒಪ್ಪಿಗೆ ದೊರೆಯಿತು ಯಾರೂ ಪ್ರತಿಭಟಿಸಲಿಲ್ಲ.

ಖಾನ್ ಬಹದ್ದೂರ್ ಅಬ್ಬಾಸ್ ಖಾನರು— ಮುಸ್ಲಿಮರ ದಾಂಪತ್ಯ ವಿಚ್ಛೇದನದ ಬಿಲ್ಲನ್ನು, ಆ ಜನಾಂಗದ ಅನುಕೂಲಕ್ಕಾಗಿಯೂ ವಾದಿಸಿ, ಸಭೆಯು ಮುಂದಿಟ್ಟರು. ಸೆಲೆಕ್ಟ್ ಕಮಿಟಿಗೆ ಹೋಗಲು ಒಪ್ಪಿಗೆ ದೊರೆಯಿತು

ನ್ಯಾ. ಸಭಾಧ್ಯಕ್ಷರು, ಸದಸ್ಯರು ಮಾತನಾಡುವ ವಿಚಾರದಲ್ಲಿ ತಿಳುವಳಿಕೆಯನ್ನು ಸೂಚಿಸಿದರು. ಮೈಸೂರು ಚೀಫ್ ಸೆಕ್ರೆಟರಿಯವರ ಮತ್ತು ಸರಕಾರದ ಉತ್ತರಕ್ಕೂ ಉದ್ದೇಶದಲ್ಲಿ ಭಿನ್ನಾಭಿಪ್ರಾಯವಿಲ್ಲ ಆದರೆ ನಡವಳಿಕೆ ಬಗ್ಗೆ ಮಾತ್ರ ಹೇಳಿದ್ದು, ರಾಜಕೀಯ ಒಂದಿಗಳು ತಾವು ರಾಜಕೀಯ ಚಳುವಳಿದಲ್ಲಿ ಸಹಕರಿಸುವುದಿಲ್ಲವೆಂದು ಭಿನ್ನಸೆಯಿತ್ತು ಸ್ಪಷ್ಟಿಕರಣಗೊಳಿಸಿದರು.

ಸಭೆಯು ಮುಂದಿದ್ದ ನಿರ್ಣಯದ ವಿಚಾರದಲ್ಲಿ ಶ್ರೀ ಮಹದೇವಯ್ಯನವರು ದೀರ್ಘ ಭಾಷಣಮಾಡಿ, ರಾಷ್ಟ್ರೀಯ ಕಾಂಗ್ರೆಸ್ ಸಭೆ ಸಭಿಕರ ವಿಚಾರ, ಅವರನ್ನು ಸೆರೆಹಿಡಿದಾಗ ಗಲಭೆಯು ಹೇಗಿತ್ತೆಂಬುದನ್ನು ವಿವರಿಸಿ ಮಾತಾಡಿದರು. ಈ ಮಧ್ಯೆ ಕೆಲವು ಪರ್ಸಾಗಳ ಹಿಂದೆ ಕಾಂಗ್ರೆಸ್ ಸಭಿಕರು ಆ ಸಭೆಗೆ ಕರಿಸಿಕೊಳ್ಳಿವೆ ಹೋಗಿ ಆ ಸಭೆಯ ನಡೆಯದಂತೆ ಮಾಡಿದ ಬಗ್ಗೆ ಶ್ರೀ ಜವರಲಾಲರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರೆಂದರು. ಆಗ ಶ್ರೀ ರಸಜರವರು, ಎಲ್ಲೆ ಯಾವಾಗ, ಎಂದು ಪ್ರಶ್ನಿಸಿದರು. ಭಾಷಣಕಾರರು. ಉತ್ತರವನ್ನು ತೀಕ್ಷ್ಣತೆಯಿಂದ ಹೇಳಿದರು ಗಡಬಡಿ ಉಂಟಾಯ್ತು. ಇವರು ಭಾಷಣಕ್ಕೆ ತೊಂದರೆ ಮಾಡುತ್ತಾರೆಂದು ಹೇಳಿದಾಗ, ಅಧ್ಯಕ್ಷರು, ಪ್ರಶ್ನೆಕಾರರಾಗಲೀ ಭಾಷಣಕಾರರಾಗಲಿ, ಅಧ್ಯಕ್ಷರನ್ನು ಸೂಚಿಸಿ ಮಾತಾಡಬೇಕೇ ಹೊರತು ಬೇರೆಯಲ್ಲ ಎಂದರು. ಶ್ರೀ ಮಹದೇವಯ್ಯನವರು ಕ್ಷಮೆಯಾಚಿಸಿ ಪ್ರಾರ್ಥಿಸಿದರು

ಎಂತೆಂಥ ತಿಂಡಿಗಳು?

ಬಿಸಿ ಬಿಸಿ ಟೋಕಿಯೊ ಬಾಂಬು (2-0-0) ಜಪಾನ್ ಉಪ್ಪೇರಿ (2-0-0), ಕೈಕಾಲು ಮುರಿದ ಶತ್ರು (1-1-0) ಬೆಯಿಸಿದ ಟೋಜೋ (1-4-0), ಭೂಕಂಪ ಟೋಕಿಯೋ (1-4-0) ಬಿಸಿಮಾಡಿದ ಚಿಕ್ಕ ಜಪಾನಿಯರು (2-7-0). ಜಾಪ್ ದೆವ್ವಸಾರು (0-6-0) ಎಂದು ದೇಹಲಿಯಲ್ಲಿ ಹೋಟಲ್‌ನವರು ತಿಂಡಿಯನ್ನು ಮಾರುತ್ತಿರುವುದು.

ಹೇಗಿದೆ ಚಟುವಟಿಕೆ

ಅಲಾಸ್ಕಾದಲ್ಲಿ ಒಂದು ಆಸ್ಪತ್ರೆಯು ಬೆಂಕಿಯಿಂದ ಸುಟ್ಟುಹೋಯಿತು. ಇಪ್ಪತ್ತನಾಲ್ಕು ಘಂಟೆಯೊಳಗೆ ಮತ್ತೊಂದು ಆಸ್ಪತ್ರೆಯನ್ನು ವಿನೂತನಗಳಲ್ಲಿ ಅಮೆರಿಕಾದವರು ಅಲ್ಲಿಗೆ ಕಳುಹಿಸಿ ಕೆಲಸಕ್ಕೆ ಆರಂಭಿಸಿದರು.

ಅಯ್ಯೋ ಪಾಪ !

ಕಲ್ಲಿಜ್ಜಲನ್ನು ಯುದ್ಧ ಇಲಾಖೆಯು ಮದ್ದು ಹೆಚ್ಚು ಹೆಚ್ಚಾಗಿ ಉಪಯೋಗಿಸುವುದರಿಂದ ಇಂಗ್ಲೆಂಡಿನಲ್ಲಿ ಕೆಲಸಗಾರ ಹೆಂಗಸರು ತಣ್ಣೀರಿನಲ್ಲಿ ಮುಖ ತೊಳೆಯಬೇಕು. ಹೋಟಲಿನಲ್ಲಿ ಹೊಸಬರಿಗೆ ವಾರಕ್ಕೆ ಒಂದಾವರ್ತಿ ಮಾತ್ರ ಬಿಸಿನೀರಿನ ಸ್ನಾನ.

ಪಾಕಿಸ್ಥಾನ ನ್ಯಾಯವೇ

ಭಾರತ ದೇಶದಲ್ಲಿ ಎಲ್ಲೆಲ್ಲಿಯೂ ಹಿಂದೂಗಳ ಫಲಹಾರ ಮಂದಿರಗಳೂ ಹಿಂದುಗಳ ದೇವಾಲಯಗಳೂ, ಹಿಂದೂಗಳ ವಸತಿಗೃಹಗಳೂ ಇರುವದರಿಂದಲೂ, ಹಿಂದೂಗಳು ತಮ್ಮೊಂದಿಗೆ ಊಟಉಪಚಾರಾದಿಗಳಲ್ಲಿ ಸೇರಿಕೊಳ್ಳದೆ ದೂರರಾಗಿರುತ್ತಾರಾದುದರಿಂದಲೂ ಶ್ರೀ ಜಿನ್ನಾರವರು ಪಾಕಿಸ್ಥಾನವನ್ನು ಕೇಳುತ್ತಿರುವದು ನ್ಯಾಯವೆಂದು ಒಬ್ಬರು ಅಭಿಪ್ರಾಯಪಟ್ಟಿರುವರು. ಎಲ್ಲಾ ದೇಶಗಳಲ್ಲಿಯೂ ಆಯಾ ದೇಶೀಯರಿಂದ ವಸತಿಗೃಹಗಳೂ, ದೇವಾಲಯಗಳೂ ನೂರಾರಾದವು ಹೆಚ್ಚು ಸಂಖ್ಯೆಯಲ್ಲಿರುವದು ಸಹಜವೇ ಎಂಬುದನ್ನು ಅವರು ಯೋಚಿಸಿರುವಂತೆ ಕಾಣುವದಿಲ್ಲ

ಭಾಷಣಕಾರರು ಕಾಲ ಕ್ಲಾಪ್ತವನ್ನು ಮೀರಿತು ಭಾಷಣಮಾಡಬಾರದೆಂದು ಅಧ್ಯಕ್ಷರು ಸೂಚಿಸಿ, ಸರ್ವರಿಗೂ ಅವಕಾಶ ದೊರಯಬೇಕೆಂದರು.

ಶ್ರೀ ತಾರೇಗೌಡರು ಉತ್ತರ ಹೇಳುತ್ತಾ, ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡಿದಂತೆ ರಾಜಕೀಯ ಖೈದಿಗಳನ್ನೂ ಮಾಡಬೇಕು ಎಂದು ಹೇಳಿ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಂಡರು.

ಸಿನಿಮಾ ಪ್ರೇಕ್ಷಕರಿಗೆ

ಹಿಂದೂಸ್ಥಾನದಲ್ಲಿ ಸಿನಿಮಾ ನೋಡುವವರು ನೂರಕ್ಕೆ 75 ರಷ್ಟು ಒದ್ದಿ ಇಲ್ಲದವರು ಎಂದು ಮುಂಬಯಿ ಫಿಲ್ಮ್ ಇಂಡಿಯಾ ಎಡಿಟರ್ ಬಾಬೂರಾವ್ ಪಟೇಲರು ಹೇಳುತ್ತಾರೆ. ಅಲ್ಲಿ ಈಗ ಒಂದು ಚಿತ್ರವನ್ನು ತೋರಿಸುತ್ತಿರುತ್ತಾರೆ ಈ ಚಿತ್ರವು ಬಂದು ಮುಂದಿದಲ್ಲೇ ಆರು ವಾರದಿಂದ ನಡಿದು ಪ್ರತಿ ದಿವಸವೂ ಸಾವಿರಾರು ಜನರು ನೋಡುತ್ತಿರುವರು. ಈ ಚಿತ್ರವು ಜೆನ್ನಾಗಿಲ್ಲವಂತೆ ಹಿಂದೂಸ್ಥಾನದಲ್ಲಿ ಓದಬಲ್ಲವರು ನೂರಕ್ಕೆ 9 ಮಂದಿಯಂತೆ. ಒಂದು ಚಿತ್ರವು ಜೆನ್ನಾಗಿಲ್ಲವೆಂದು ತಿಳಿಯುವುದು ಹೇಗೆ ? ಒಂದು ಸಲವಾದರೂ ನೋಡಬೇಕಲ್ಲವೆ ? ಇದರಂತೆ ಒಂದು ಸಲ ನೋಡುವುದು ತಪ್ಪೇ ? ಜೆನ್ನಾಗಿದ್ದರೆ ಜನರೇ 3-4 ಆವರ್ತಿ ನೋಡುವರು. ಮೈಸೂರಿನಲ್ಲಿ ಒಂದು ಕನ್ನಡ ಒಂದು ತಮಿಳು ಈ ಎರಡು ಚಿತ್ರವನ್ನು ಬಹುಮಂದಿ 4-5 ಸಲಕ್ಕಿಂತ ಹೆಚ್ಚು ವೇಳೆ ನೋಡಲಿಲ್ಲವೆ ? ತಮಾಷೆ ಎಂದು ಒಂದು ಸಲ ಹೋಗಿ ನೋಡಿ ಅಸಹ್ಯ ಪಟ್ಟುಕೊಳ್ಳಲಿಲ್ಲವೇ ? ಜೆನ್ನಾಗಿದ್ದರೆ ಪ್ರೇಕ್ಷಕರೇ ಪ್ರೋತ್ಸಾಹಿಸುತ್ತಾರೆ. ಹಿಂದೂದೇಶದವರನ್ನು ಬುದ್ಧಿ ಇಲ್ಲದವರೆಂದು ಎಡಿಟರ್ ಬಾಬೂರಾವ್ ಪಟೇಲರು ಹೇಳುವುದು ಶುದ್ಧ ತಪ್ಪು. ಇವರು ಉಪಯೋಗಿಸಿರುವ ಫೂಲ್ ಎಂಬ ಪದವನ್ನು ವಾಪಸು ತೆಗೆದುಕೊಳ್ಳಬೇಕು.

ಇದೂ ಒಂದು ತಂತ್ರವೇ!

ಹಿಟ್ಲರಿಗೆ ಇನ್ನು ಮುಂದೆ ಯುದ್ಧ ಮಾಡಿ ಗೆಲ್ಲಲು ಸಾಧ್ಯವಿಲ್ಲ. ಮಾತಿನಲ್ಲಾದರೂ ಗೆಲ್ಲು ಎಂದು ಸಂಧಿಮಾಡುವ ಝರಿವಾಲರನ್ನು ಮಿತ್ರಮಂಡಲಿ ಹತ್ತಿರ ಕಳುಹಿಸುತ್ತಿರುವನಂತೆ. ಗೂಢಚಾರರನ್ನಾಗಲೀ ಪಂಚಮದಳದವರನ್ನಾಗಲೀ ನಂಬದರೂ ನಂಬಬಹುದು, ಆದರೆ ಈ ಝರಿವಾಲಗಳ ಮಾತಿಗೆ ಮರುಳಾಗಬಾರದು.

ಸರಿಸಮಾನವಿಲ್ಲ

ದೇಹಲಿಯ ಕೆಂದ್ರ ಕಛೇರಿಯಲ್ಲಿ ಒಬ್ಬ ಅಂಗ್ಲೋ ಇಂಡಿಯನ್‌ಗೆ ತಿಂಗಳಿಗೆ 400 ರೂಪಾಯಿ ಸಂಬಳವಾದರೆ ಅದೇ ಗ್ರೇಡಿನಲ್ಲಿರುವ ಹಿಂದೂದೇಶದವನಿಗೆ 100 ರೂಪಾಯಿ. ಈ ಅಂಗ್ಲೇಯನೆನ್ನಿಸಿಕೊಳ್ಳುವನಿಗೆ ಕ್ಲೋರಕ್ಕೂ ಸಂಬಳದಲ್ಲಿ ಸೇರಿಸಿ ಕೊಡುತ್ತಾರೆ

ಪೆಟ್ರೋಲಿನ ಬದಲು ತೆಂಗಿನಕಾಯಿ ರಸ

ಇನ್ನು ಮುಂದೆ ಸಂಪಳ ದ್ವೀಪದಲ್ಲಿ ಪೆಟ್ರೋಲಿಗೆ ಒದಲು ತೆಂಗಿನಕಾಯಿ ರಸದಿಂದ ಗಾಡಿಗಳನ್ನು ಓಡಿಸುವರು. ಇದರ ಖರ್ಚು ಸಲಭ. ಸಂಪಳ ದ್ವೀಪದಲ್ಲಿ ತೆಂಗಿನ ಸಾಗುವಳಿ ವಿಶೇಷ.

ಈ ವಾರದ ಕಥೆ

ಮದುವೆಯ ಮಜಾ

(ಅನುವಾದ)

ನನ್ನ ಹೆಂಡತಿಯ ತಂಗಿಯ ಮದುವೆಯು ನಿಶ್ಚಯವಾಯಿತು. ನಮಗೂ ಆಹ್ವಾನ ಬಂದಿತು. ಇನ್ನು ನಮ್ಮವಳ ಆನಂದಕ್ಕೆ ಮೇರೆಯೆ ಇದ್ದೀತೇ! ಆದರೆ ಮದುವೆಗೆ ಹೋಗುವದೆಂದರೆ ಬಾಯಿಮಾತೇ! ಅದರ ಪಟಾಟೋಪ ಇಷ್ಟಿಷ್ಟಲ್ಲ, ಗಲಾಟೆಯೆಲ್ಲಾ ನಮ್ಮವಳದೇ. ಇನ್ನು ಮದುವೆಗೆ ಒಂದು ವಾರವಿದೆಯೆನ್ನುವಾಗಲೇ ನಮ್ಮವಳು ಬ್ಲೌಂದು ಪಟ್ಟಿಯನ್ನು ತಯಾರಿಸಿ ಕೊಟ್ಟಳು. ಹೊಸ ಸೀರೆಗಳು ಆಭರಣಗಳು, ಸೆಂಟುಗಳು, ಕೈಸ್ವಡಿಗಳು ಮೊದಲನೆಯ ದರ್ಜೆಯ ವಸ್ತುಗಳು ಆಮ್ಲಾ ತಲೆ ಎಣ್ಣೆ. ವೈಟ್‌ರೋಸ್‌ಸೋಪು ಈ ಮೊದಲಾದವುಗಳು ಆ ಪಟ್ಟಿಯ ಲ್ಲಿದ್ದವು. ಇದುವರೆಗೆ ಒಳಕೆಯಿಲ್ಲದಿರುವ ಇಷ್ಟೆಲ್ಲಾ ಸೀರೆಗಳೂ ಆಭರಣಗಳೂ ಉಪಯೋಗಪಡುವದಿಲ್ಲವೇ ಎಂದರೆ ಉಪಯೋಗಪಡದಿರಲ್ಲ, ಮದುವೆಯು ಹೊಸದಾದುದರಿಂದ ಮದುವೆಗೆ ತಕ್ಕ ಸೀರೆಗಳೂ, ಆಭರಣಗಳೂ ಹೊಸದೇ ಇರಬೇಕು ಎಂದಳು ಇವು ಸ್ತ್ರೀಸ್ವಾತಂತ್ರ್ಯದ ದಿನಗಳು, ಒದಲು ಮಾತನಾಡಿದರೆ ವಿವಾಲ್ವರಿನಿಂದ ಷೂಟ್ ಎಂಬ ಮಾತೇ! ಇವು ರಿಪ್ರೆಂಜುನೆಂಟು ಡಿಪ್ರೆಷ್ಷನ್ ದಿನಗಳು ನನಿಗೆ ಸಂಬಳ 40 ರೂಪಾಯಿ ಅದು ಸಾಲದೆ ಸಾಲವನ್ನೂ ಮಾಡಬೇಕಾಗುತ್ತೆ, ಈ ವಿವಾಹದ ವಿಷಯದಲ್ಲಿ ಆಭರಣಗಳ ವಿನಹಾ ವಿಕ್ಕ ಎಲ್ಲವನ್ನೂ ಪಟ್ಟಿಯ ಂತೆ ತೆಗೆದುಕೊಂಡು ಬಂದೆ. 'ಒಡವೆಗಳನ್ನೇಕೆ ತರಲಿಲ್ಲ' ಎಂದು ಪ್ರಶ್ನಿಸಿದಳು ನಮ್ಮವಳು 'ಈಗ ಬಂಗಾರದ ಬೆಲೆ ಹೆಚ್ಚು ಅಗ್ಗವಾದಾಗ ಕೊಂಡುಕೊಳ್ಳೋಣ' ಎಂದು ಹೇಳಿದೆ, ಇನ್ನೆಷ್ಟಿನು! ಮಹಿಷಾಸುರ ಮರ್ದಿನಿಯ ಅವತಾರವನ್ನು ತಾಳಿ ಮನೆಯಲ್ಲಿದ್ದ ಪಿಂಗಾಣಿ ವಸ್ತು ಗಾಜಿನ ಪಾತ್ರೆಗಳ ಮೇಲೆ ನೃತ್ಯವನ್ನು ಮಾಡಲಾರಂಭಿಸಿದಳು. ಆಗ ನಾನು ಓ ಜಗನ್ಮಾತೆಯೇ! ಓ ಜಗತ್ ಜನನಿಯೇ! ಈ ಡಿಪ್ರೆಷ್ಷನ್ ದಿನಗಳು ಕಳೆದು ಭಂಗಾರವು ಸ್ವಲ್ಪ ಅಗ್ಗವಾದೊಡನೆ ಹೊಸ ಆಭರಣಗಳ ವಿಷಯವನ್ನು 'ಸರ್ವಿಸಿಕೊಳ್ಳುವೆನು' ಎಂದು ಮೊರೆಯನ್ನಿಡಲು ಭಕ್ತ ಪರಾಧೀನಳಾದುದರಿಂದ ತನ್ನ ವಿಶ್ವರೂಪ ಸಂದರ್ಶನವನ್ನು ನಿಲ್ಲಿಸಿ ಶ್ರೀ ಕೃಷ್ಣನು ತನ್ನ ನಿಜರೂಪವನ್ನು ಪುನಃ ಅರ್ಜುನನಿಗೆ ತೋರಿಸಿದಂತೆ ತನ್ನ ನಿಜ ಭಾರ್ಯತ್ವವನ್ನು ಪ್ರಕಟಿಸಿದಳು.

ಮದುವೆಗೆ ಹೊರಡಬೇಕಾದ ದಿನ ಬಂದಿತು. ನಾವು ಹೊರಡಬೇಕಾಗಿದ್ದ ಪ್ಯಾಸೆಂಜರುಗಾಡಿಯು ಬೆಳಿಗ್ಗೆ 10 ಗಂಟೆಗೆ ಬರುತ್ತಿತ್ತು? ನಮ್ಮವಳು ಹಿಂದಿನ ರಾತ್ರಿ ಪದಾರ್ಥಗಳನ್ನು ಸಿದ್ಧಪಡಿಸಿಕೊಳ್ಳುವ ಗಲಾಟೆಯಲ್ಲಿ ನನಗೆ ನಿದ್ದೆ ಹತ್ತಲಿಲ್ಲ. ರಾತ್ರಿ ಎರಡು ಗಂಟೆಯಾದಾಗಲೇ ಎಬ್ಬಿಸಲು ಮೊದಲಿಟ್ಟಳು. ಅಘ್ಘಸಿನಲ್ಲಿ ಮೈಮುರಿಯುವಂತೆ ಕೆಲಸ ಮಾಡಿ ಒಂದುದರಿಂದ ನನಗೆ ಗಾಢ ನಿದ್ರೆ ಒರುತ್ತಿತ್ತು. ನಮ್ಮವಳು ಎಷ್ಟು ಬಾರಿ ಎಬ್ಬಿಸಿದರೂ ನಾನು ಮಾವುಲಿಸುತ್ತೆ ೭॥ ಗಂಟೆಗೇ ಎದ್ದೆ. ಆ ವೇಳೆಗೆ ನಮ್ಮವಳು ನನಗಾಗಿ ಬಿಸಿ ಬಿಸಿ ಕಾಫಿ ಸಿದ್ಧಮಾಡಿಟ್ಟಿದ್ದಳು. ಗಬಗಬಾ ಕಾಲಕೃತ್ಯಗಳನ್ನು ತೀರಿಸಿಕೊಂಡು ಆ ಬಿಸಿಬಿಸಿ ಕಾಫಿಯನ್ನು ಗಂಟಲೊಳಗೆ ಸುರಿದುಕೊಂಡೆನು. ಇನ್ನೂ ಆ ವೇಳೆಗೆ ಅಗಸನವನು ಒಗೆದ ಒಟ್ಟೆಗಳನ್ನು ತಂದಿರಲಿಲ್ಲ. ಅತನು ಬರುತ್ತಲೂ ಸ್ವಲ್ಪ ಕೋಪ ಮಾಡಿಕೊಂಡೆನಾಗಲಿ ಅವನು ಗಾಂಧೀ ಶಿಷ್ಯನಾದುದರಿಂದ ಪ್ರಸನ್ನವದನನು. ಆ ವೇಳೆಗೆ ೮॥ ಹೊಡೆಯಿತು. ಒಟ್ಟೆಗಳನ್ನೆಲ್ಲವನ್ನೂ ಟ್ರಂಕಿನಲ್ಲಿಡಲು ಹೇಳಿ ನಾನು ಸ್ನಾನ ಮಾಡಲು ಹೊರಟೆ ಸ್ನಾನ ಮುಗಿಸಿಕೊಂಡು ಬಂದೆನಾಗಲಿ ಅಕ್ಕಯು ಆ ಕೆಲಸವನ್ನು ಮಾಡಿರಲಿಲ್ಲ. ಏಕೆಂದರೆ ಮದುವೆಯಲ್ಲಿ ಧರಿಸಲು ಯಾವುವು ಚೆನ್ನಾಗುತ್ತವೆ ಎಂಬುದನ್ನು ಯೋಚಿಸುತ್ತಿದ್ದಳು. ರೈಲಿಗೆ ಹೊತ್ತಾಗುತ್ತೆ ಎಂದು ಹೇಳಿದ ಕೂಡಲೆ ಹೇಗೋ ಅರೇಂಜುಮಾಡಿದಳು ಬೇಗಬೇಗ ಊಟಮಾಡಿ ಎರಡು ಜಟ್ಕಾಗಳಿಗೆ ಹೇಳಿಕಳುಹಿಸಿದೆ. ಅಷ್ಟರೊಳಗೆ ನಮ್ಮವಳು ಮನೆಯಲ್ಲಿ ಎಲ್ಲವನ್ನೂ ಭದ್ರಪಡಿಸಿ ಮನೆಗೆ ಬೀಗ ಹಾಕಿ, ಹೊರಗೆ ಒಂದು ಸಿದ್ಧಳಾಗಿ ನಿಂತಳು.

ಆ ವೇಳೆಗೆ ಬಂಡಿತ್ತವರೆ ಹೊಡೆಯಿತು. ಜಟಕಾ ಗಾಡಿಗಳು ಬಂದವು. ಒಂದರಲ್ಲಿ ಸಾಮಾನುಗಳನ್ನು ಹಾಕಿಸಿ ಎರಡನೆಯದರಲ್ಲಿ ನಾವಿಬ್ಬರೂ ಕುಳಿತುಕೊಂಡೆವು, ನಮ್ಮ ಜಟಕಾಗಳು ಅರ್ಧ ದೂರ ಹೋಗುವ ವೇಳೆಗೆ ನಾವು ಕೂತಿದ್ದ ತೆ ಗಾಡಿಯು ಗಲಾಟೆ ಮಾಡಲಾರಂಭಿಸಿತು. ಮುಂದೆ ಹೆಜ್ಜೆಯಿಡಲಿಲ್ಲ. ರೈಲಿಗೆವ ಎಂದೇ ಇರುತ್ತದೆ.

ಮೈಸೂರು ನ್ಯಾಯನಿಧಾಯಕ ಸಭೆ

('ಸತ್ಯವಾದಿ' ಸ್ಪೆಷಲ್ ಸುದ್ದಿಗಾರರಿಂದ) ಬೆಂಗಳೂರು ಡಿ 14

ಕಡೆಯ ದಿನದ ಕಾರ್ಯಕಲಾಪ

ಮಿ॥ ಅಬ್ದಾಸ್ ಖಾನರು:— ಮೈಸೂರು ದೇಶದಲ್ಲಿ ಕಳೆದು 2 ವರ್ಷಗಳಿಂದ ಕುದುರೆ ಜೂಜಿನಲ್ಲಿ ಗುಟ್ಟಾಗಿ ಬಾಜಿ ಕಟ್ಟುತ್ತಿರುವ ವಿಷಯದಲ್ಲಿ ಹಾಕಿದ ಪ್ರಶ್ನೆಗೆ ಉತ್ತರ ಕೊಡಲಾಯಿತು.

ಶ್ರೀ ರಾಮಚಂದ್ರರಾಯರು ಮೈಸೂರು ಸಂಸ್ಥಾನಾವಳಿ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಮೈಸೂರು ಗ್ರಾಜುಯೇಟುಗಳೆಷ್ಟುಮಂದಿ ಸೇವಿಸಲ್ಪಟ್ಟಿರುವರು ಮುಂತಾಗಿ ಹಾಕಿದ ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತ.

ಹೀಗೆ ಇನ್ನೂ ಕೆಲವು ಪ್ರಶ್ನೋತ್ತರಗಳಾದಸಂತರ, ಶಾಸನಾವುಗಳು ತೆಗೆದುಕೊಳ್ಳಲ್ಪಟ್ಟವ.

ಶ್ರೀ ರಾಜುರನರು, ರಾಜಕೀಯ ಒಂದಿಗಳನ್ನು ಬಿಡುಗಡೆ ಮಾಡಬೇಕೆಂಬ ವಿಷಯದಲ್ಲಿ ಒಂದು ಅವಸರದ ತರ್ತವನ್ನು ತಂದು, ಅನೇಕಾನೇಕ ವಿಷಯುಗಳನ್ನು ತಿಳಿಸಿ ಅಮೋಘ ಭಾಷಣ ಮಾಡಿದರು. ಶ್ರೀ ರಾಮನಾರ್ಥ್ಕರವರು ಇದನ್ನು, ಅನೇಕ ಕಾರಣಗಳಿಗೋಸ್ಕರ ಸರಿಯಾಗಿಲ್ಲವೆಂದು ತಿಳಿಸಿ ವಿರೋಧಿಸಿದರು. ಇದು ತಳ್ಳಿ ಹಾಕಲಾಯಿತು.

ಏ॥ ಮಹಮದ್ ಸೇಟರು ಕಚ್‌ವೆಸ್ಕ್ ಬಿಲ್ಲನ್ನು ಸಭೆಯ ಮುಂದಿಟ್ಟು, ಜಾರಿಗೆ ತರಬೇಕೆಂದು ಪ್ರಾರ್ಥಿಸಿದರು ಅಂಗೀಕೃತವಾಯಿತು.

ಶಸಮಾರ ಪ್ರಾರಂಭವಾದ ಸಭೆಯು ಮುಂದುವರಿಸಿದುದಕ್ಕಾಗಿ ನಿಲಿಸಿದ್ದ ಶ್ರೀ ಮುತ್ತರಾಜುರವರು "ಹರಿಜನರ ದೇವಾಲಯ ಪ್ರವೇಶ" ಸಂಬಂಧದ ನಿರ್ಣಯವು ಬಹುಮತಿಯಾಗಿ, ಪರವಾಗಿಯೂ, ವಿರೋಧವಾಗಿಯೂ ಅನೇಕ ಭಾಷಣಗಳಾದವು. ವೋಟಿಗೆ ಹಾಕಲಾಗಿ 23 ಮಂದಿ ಪರವಾಗಿಯೂ, 21 ಮಂದಿ ವಿರೋಧವಾಗಿಯೂ ಮತ ಕೊಟ್ಟಿದ್ದರಿಂದ ಅಂಗೀಕರಿಸಲ್ಪಟ್ಟಿತು.

ಅಸ್ಪೃಶ್ಯ ನರಸುಗಳ ವಿಚಾರ ಪ್ರಶ್ನೋತ್ತರ ನಡೆಯಿತು,

25 ಸ್ಟಾರ್ಡ್ ಪ್ರಶ್ನೆ, ಪೈಕಿ 11 ಹಿಂದಕ್ಕೆ ತೆಗೆದುಕೊಳ್ಳಲಾಯಿತು. 114 ಪ್ರಶ್ನೆಗಳಲ್ಲಿ 100 ಕ್ಕೆ ಉತ್ತರ ಕೊಡಲಾಯಿತು.

ಶ್ರೀ ಕೇಶವಯ್ಯಂಗಾರ್ಯರನ್ನು ಅವರು ಸಲ್ಲಿಸಿದ ರಾಜಪ್ರಜಾ ಸೇವೆಗಾಗಿ ಅನೇಕ ಸಭಿಕರೂ ಸಭಾಧ್ಯಕ್ಷರೂ ಅಭಿನಂದಿಸಿದರು. ಶ್ರೀ ಕೇಶವಯ್ಯಂಗಾರ್ಯರು ಸಕಲರನ್ನು ವಂದಿಸಿ ಯುಕ್ತಭಾಷಣ ಮಾಡಿದರು. ಸಭೆಯು ಮುಕ್ತಾಯವಾಯಿತು.

ತಾಮ್ರದ ಸಾಣ್ಯ ಏಕೆ ಸಿಕ್ಕುತ್ತಿಲ್ಲ?

ಹೈದರಾಬಾದಿನಲ್ಲಿಯು ತಾಂಬ್ರದ ನಾಣ್ಯಗಳನ್ನು ಬ್ರಿಟಿಷ್ ಇಂಡಿಯಾಕ್ಕೆ ಸಾಗಿಸಿ ಅಲ್ಲಿ ಅದನ್ನು ಕರಗಿಸಿ ಅದನ್ನು ಲೋಹದ ರೀತಿ ಮಾರುತ್ತಿರುವರೆಂದೂ, ಬ್ರಿಟಿಷ್ ಇಂಡಿಯಾದಲ್ಲಿ ತಾಂಬ್ರವು 80 ತೋಲಕ್ಕೆ ಆರು ರೂಪಾಯಿಯಂತೆ ಬಿಕರಿಯಾಗುವುದೆಂದೂ ಒಂದು ರೂಪಾಯಿ ಮೌಲ್ಯದ ತಾಂಬ್ರದ ನಾಣ್ಯಗಳಲ್ಲಿ 30 ತೊಲ ತಾಂಬ್ರ ದೊರಕುವುದೆಂದೂ ಹೇಳಲಾಗಿದೆ ಸ್ವೈಚಾರ ಸರಕಾರವು ಇಂತಹ ತಕ್ಷೀರಿಗೆ ಐದು ವರ್ಷ ಸಜೆ ವಿಧಿಸಲಾಗುವುದೆಂದು ಪ್ರಕಟಿಸಿರುವುದರಿಂದ ಇದು ಮುಂದೆ ಕಡಿಮೆಯಾಗಬಹುದೆಂದು ಅರಿಯಬಹುದು.

ಹೊತ್ತಾಗುತ್ತೆ ಎಂದು ನಾನೂ ನನಗಿಂತ ಹೆಚ್ಚಾಗಿ ನಮ್ಮವಳೂ ಜಟಕಾದವನನ್ನು ಬೇಗ ನಡಿಸಲು ತೊಂದರೆ ಪಡಿಸಿದೆವು ಅವನೂ ಕುದುರೆಗೆ ಕೊರಡಾಡಿದ ಹೊಡೆದನು. ಕುದುರೆಯು ಹೆಜ್ಜೆಯಿಡಲಿಲ್ಲ. ಇನ್ನೂ ಹೊಡೆದ. ಏನೂ ಫಲವಾಗಲಿಲ್ಲ ನಮ್ಮವಳ ಪೌರುಷಕ್ಕಿಂತ ಕುದುರೆಗೆ ಹೆಚ್ಚು ಪೌರುಷವಿದ್ದಂತಿತ್ತು. ಹೊಡೆತದಿಂದ ಕೋಪಗೊಂಡು ಕುದುರೆಯು ವಾಯುವೇಗದೊಡನೆ ಓಡಲಾರಂಭಿಸಿ ಒಂದು ಮರಕ್ಕೆ ಡಿಕ್ಕಿ ಹೊಡೆಯಿತು. ಇನ್ನೂ ನಮ್ಮ ಅವಸ್ಥೆ ಏನೆನ್ನಬೇಕು? ಕುದುರೆ, ಗಾಡಿ ಎರಡೂ ತಲೆಕೆಳಗಾಗಿ ಬಿದ್ದವು. "ನಾಲ್ವರೊಂದಿಗೆ ನಾರಾಯಣ" ಎನ್ನುವಂತೆ ಅವುಗಳೊಂದಿಗೆ ನಾನೂ, ನಮ್ಮವಳೂ ಕೆಳಗೆ ಬಿದ್ದೆವು. ಇದರ ಫಲವಾಗಿ ನಾನೂ ನಮ್ಮವಳೂ ಆಸ್ಪತ್ರೆಯಲ್ಲಿ ಇಷ್ಟಪೇಷೆಂಟುಗಳಾಗಿ ದಾಖಲು ಆಗಬೇಕಾಗಿ ಬಂದಿತು. ನಮಗೆ ತಗಲಿದ ಗಾಯಗಳಿಗೆ ಕಟ್ಟುಗಳನ್ನು ಕಟ್ಟಿ ಆಸ್ಪತ್ರೆಯಲ್ಲಿ ಇನ್ನೂ ಔಷಧಿಯನ್ನು ಹಾಕುತ್ತಿರುವರು. ಈ ವೇಳೆಗೆ ಮದುವೆಯು ಮುಗಿದೇ ಇರುತ್ತದೆ.

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ಸಿರಪ್ ವ್ಯಾಪಾರದ ITL ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರದ ತೊಂದರೆ, ಹೊಟ್ಟೆ ಹಿಡಿತ, ಹಲ್ಲು ಬರುವಾಗ ಆಗುವ ತೊಂದರೆ ಇತ್ಯಾದಿಗಳನ್ನು ನಿವಾರಿಸುತ್ತದೆ.

ಸೇವಿಸಲು ರುಚಿಕರ

ಮತ್ತು ಬರುವ ಮೂಲಿಕೆಗಳ ಮಿಶ್ರಣವಿಲ್ಲ

ಶೀತ ಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಡಸ್ಟ್ರಿಯಲ್ ಆಂಡ್ ಟೆಸ್ಟಿಂಗ್ ಲೆಬೊರೇಟರಿ

ಮಲ್ಲೇಶ್ವರಂ, ಬೆಂಗಳೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಪುಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಹಾಲು ಪಾನೀಯಗಳು

ನಮ್ಮಲ್ಲಿ ಒಂದು ವಿಶೇಷವೆನಿ

ಕೆನೆ, ಬೆಣ್ಣೆ, ಆತಿ ಮಧುರವಾದ ಕ್ರೀಮ್, ಇವುಗಳಿಗೆ

ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ

ಸಿಟಿನನ್ ಡೈರಿ ಟೆಲಿಫೋನ್ ನಂಬರು 492

ಹಳೇಪೋಸ್ಟಾಫೀಸ್‌ರಸ್ತೆ, ಮೈಸೂರು

For Sale

1 secondhand Remington typewriter No. 7 'A' Rs. 55 net.
,, Smith premier ,, 4 'A' Rs. 55 ,,
,, Empire ,, 1 'D' Rs. 55 ,,

Apply to— P. N. Ghose. 132 M. S. Pal Chowdhury Lane
P. O. Howrah, North Bantra, Dist. Howrah.

ಮಂಗಳೂರು ಸುವರ್ಣ

ಸ್ಪೆಷಲ್ ಟೀಡಿಯನ್ನೇ

ಉಪಯೋಗಿಸಿ. ಒಳ್ಳೇ ಸಿಪ್ಪಾನಿ ಹೊಗೇ ಸೊಪ್ಪಿನಿಂದ ತಯಾರಿಸಿರುತ್ತೆ. ಒಂದಾವರ್ತಿ ಪರೀಕ್ಷಿಸಿ ನೋಡಿ.

ಮೈಸೂರು ಏಜೆಂಟರು, ಪಿ. ವೆಂಕಟಪ್ಪ

ಬೇರೆ ಸ್ಥಳಗಳಿಗೆ ಏಜೆಂಟರು ಬೇಕು.

WONDERFUL REMEDY for all Digestive Troubles

A speciality in gastric ulsers, duedamal ulcers. Radical cure guaranteed. Apply to—

S. Lingai Gowda
Kurubar Street, Kollegal.

ಉತ್ತಮ ಕಾಫೀ

ಸುವಾಸನೆ! ಅತ್ಯಂತ ರುಚಿ!

ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮೀನಾರಾಯಣ ಕಾಫೀವರ್ಕ್ಸ್!

ಕೊಳ್ಳೇಗಾಲ

Marriage Gazette

The only illustrated monthly o urnal of its kind in India containing very interesting aud instructive articles on matrimoniatopics.

Apply....

The Indian Marriage Gaxette
Bangalore City

For good printing

Saraswati Printing Press
Lansdowne Buildings, Mysore
— & —
Lakshminarasimha Press
Srirampet, Mysore

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಚಲನಚಿತ್ರ ಪ್ರಪಂಚಕೆಲ್ಲಾ ಅಖಿಲ ಕರ್ನಾಟಕದ ಹೆಮ್ಮೆಯ ವಾರ್ತೆ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್

ಗಾಂಧಿ ಸ್ಕ್ವೇರ್, ಮೈಸೂರು ಇವರ

ಸಂಗೀತರತ್ನ ಆಸ್ಥಾನ್ ವಿದ್ವಾನ್ ಟಿ. ಚೌಡಯ್ಯನವರು

ಕಲ್ಚರ್ಡ್ ಕಮಾಂಡಿಯಸ್ ಕೆ. ಹಿರಣ್ಣಯ್ಯನವರು ಆಭಿನಯಿಸಿರುವ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಲನಚಿತ್ರ

ತಾರಾಗಣ—ಶ್ರೀಮತಿ ಬಳ್ಳಾರಿ ಲಲಿತ, ಟಿ. ಎಸ್. ಚಂದ್ರ, ಕುಮಾರಿ ರತ್ನ, ಪಂಡರೀಬಾಯಿ, ಧನಭಾಗ್ಯಂ, ಎ. ನಾರಾಯಣರಾವ್, ಕೆ. ಎಂ. ಮುಕುದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ, ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಹೆಚ್. ಆರ್. ಶಾಸ್ತ್ರಿ, ಎಂ. ಆರ್. ಪಿ. ಸಾರಥಿ ಶ್ರೀಮತಿ ಕೆ. ಆರ್, ಶಾಂತಿರಾಜಮ್ಮ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ ಎದುರು ನೋಡಿ

ನಿರ್ದೇಶಕರು—ಜಿ. ಆರ್. ರಾಮಯ್ಯನವರು, ಸಂಗೀತ ನಿರ್ದೇಶಕರು—ಸಂಗೀತರತ್ನ ಟಿ. ಚೌಡಯ್ಯನವರು, ತಯಾರಿಕೆ—ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ, ಕಥಾ ಮತ್ತು ದಿಗ್ದರ್ಶಕರು—ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್

ಹೆಚ್ಚಿನ ವಿವರಗಳಿಗೆ—**ಜಿ. ಆರ್. ರಾಮುಯ್ಯ**, ಮ್ಯಾನೇಜಿಂಗ್ ಏಜೆಂಟ್ಸ್, ಇವರಲ್ಲಿ ತಿಳಿಯಿರಿ.